# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1215 |
| 2 | ಸದಸ್ಯರ ಹೆಸರು | ಶ್ರೀ. ಯು. ಬಿ. ವೆಂಕಟೇಶ್<br>(ನಾಮನಿರ್ದೇಶನ ಹೊಂದಿದವರು) |
| 3 | ಉತ್ತರಿಸುವ ದಿನಾಂಕ | 15-12-2023 |
| 4 | ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಹವಾಮಾನ ವೈಪರಿತ್ಯದಿಂದಾಗಿ ಕೃಷಿ ಲಾಭದಾಯಕವಲ್ಲದ ಹಿನ್ನಲೆಯಲ್ಲಿ ರೈತರು ಹಾಗೂ ಕೃಷಿ ಕಾರ್ಮಿಕರು ನಗರಕ್ಕೆ ವಲಸೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಆ. | ಬಂದಿದ್ದಲ್ಲಿ, ಈ ಕುರಿತು ರೂಪಿಸಿರುವ ಯೋಜನೆಗಳೇನು: ನೀಡುತ್ತಿರುವ ಸಹಾಯಗಳೇನು; | ಸ್ಥಳೀಯವಾಗಿ ಲಭ್ಯವಿರುವ ಕೃಷಿ ಮತ್ತು ಇತರೆ ಜೈವಿಕ ಸಂಪನ್ಮೂಲಗಳ ಪ್ರಾಥಮಿಕ ಉತ್ಪನ್ನ ಮತ್ತು ಉಪ-ಉತ್ಪನ್ನಗಳನ್ನು ಕಚ್ಚಾ ವಸ್ತುವಾಗಿ ಬಳಸಿಕೊಂಡು ಸಂಸ್ಕರಣೆ, ಮೌಲ್ಯವರ್ಧನೆ ಮೂಲಕ ಸ್ಥಳೀಯವಾಗಿ ರೈತರಿಗೆ ಉದ್ಯೋಗ ಸೃಜಿಸಿ, ರೈತರ ಆದಾಯ ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯವು ರಾಷ್ಟ್ರದಲ್ಲೇ ಪ್ರಪ್ರಥಮ ಬಾರಿಗೆ ರಾಜ್ಯ ಸೆಕೆಂಡರಿ ಕೃಷಿ ನಿರ್ದೇಶನಾಲಯವನ್ನು ಸ್ಥಾಪಿಸಲಾಗಿದೆ.<br><br>ಸೆಕೆಂಡರಿ ಕೃಷಿ ಯೋಜನೆಯಡಿ 2022-23 ನೇ ಸಾಲಿನಲ್ಲಿ, ಪ್ರಾಯೋಗಿಕವಾಗಿ 5 ಜಿಲ್ಲೆಗಳಾದ ಬೆಳಗಾವಿ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ ಮತ್ತು ಉತ್ತರಕನ್ನಡದಲ್ಲಿ ಕಾರ್ಯಕ್ರಮ ಅನುಷ್ಠಾನ ಕೈಗೊಳ್ಳಲಾಗಿದೆ. 2023-24 ನೇ ಸಾಲಿನಲ್ಲಿ ಕಳೆದ ಸಾಲಿನಲ್ಲಿ ಆಯ್ಕೆಯಾದ ಜಿಲ್ಲೆಗಳನ್ನು ಹೊರತುಪಡಿಸಿ ಕೃಷಿ ವಲಯ ಆಧಾರಿತವಾಗಿ ಹೊಸ 5 ಜಿಲ್ಲೆಗಳಿಗೆ ಅವಕಾಶ ಕಲ್ಪಿಸಲಾಗಿದ್ದು ವಿಜಯಪುರ, ಕಲಬುರ್ಗಿ, ಮಂಡ್ಯ, ದಾವಣಗೆರೆ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕಾರ್ಯಕ್ರಮದ ಅನುಷ್ಠಾನವು ಪ್ರಗತಿಯಲ್ಲಿರುತ್ತದೆ. ಸೆಕೆಂಡರಿ ಕೃಷಿ ಯೋಜನೆಯು ಹೊಸ ಯೋಜನೆಯಾಗಿದ್ದು, ಅನುದಾನ ಲಭ್ಯತಾನುಸಾರ ಪ್ರಯೋಗಾತ್ಮಕವಾಗಿ ಆಯ್ದ 5 ಜಿಲ್ಲೆಗಳಿಗೆ ಮಾತ್ರ ಅನುದಾನ ಬಿಡುಗಡೆ ಮಾಡಲಾಗಿದೆ. |

| | | |
|---|---|---|
| | | **<u>ಸೆಕೆಂಡರಿ ಕೃಷಿ ಅಡಿಯಲ್ಲಿ ಬರುವ ಈ ಕೆಳಗಿನ ಚಟುವಟಿಕೆಗಳಿಗೆ ಕುರಿತಾದ ಸಣ್ಣ ಉದ್ದಿಮೆಗಳನ್ನು ಪ್ರಾರಂಭಿಸಲು ಅವಕಾಶ ನೀಡಲಾಗಿದೆ:</u>**<br>ಅ) ಉತ್ಪಾದಿತ ಬೆಳೆಗಳ ಮೌಲ್ಯವರ್ಧನೆ: -"Type A" activities.<br>ಆ)ಪರ್ಯಾಯ ಉದ್ಯಮಗಳಿಗೆ ಉತ್ತೇಜನ – "Type B" activities: ಜೇನುಸಾಕಣೆ, ಅಣಬೆ ಬೇಸಾಯ ಇತ್ಯಾದಿ.<br>ಇ)ಕೃಷಿ, ತೋಟಗಾರಿಕೆ, ರೇಷ್ಮೆ ಹಾಗೂ ಪಶು ಸಂಗೋಪನಾ ತ್ಯಾಜ್ಯಗಳ ಬಳಕೆ ಸಂಬಂಧಿಸಿದಂತೆ ಚಟುವಟಿಕೆಗಳಿಗೆ ಉತ್ತೇಜನ- "Type –C "activities<br><br>**<u>ಸೆಕೆಂಡರಿ ಕೃಷಿಯಡಿ ನೀಡುವ ಸಹಾಯಧನ ವಿವರ:</u>**<br><u>1. ವೈಯಕ್ತಿಕ ರೈತ ಫಲಾನುಭವಿಗಳ ಮೂಲಕ ಸೆಕೆಂಡರಿ ಕೃಷಿ ಚಟುವಟಿಕೆ/ ಉದ್ದಿಮೆಗಳ ಅನುಷ್ಠಾನ:</u><br><br>ಅ) 3 ಲಕ್ಷದವರೆಗಿನ ಸಹಾಯಧನದ ಪ್ರಸ್ತಾವನೆಗಳಿಗೆ: ಎಲ್ಲಾ ವರ್ಗದ ರೈತರಿಗೆ ಕಿರು ಉದ್ಯಮವನ್ನು ಸ್ಥಾಪಿಸಲು/ ಮೇಲ್ದರ್ಜೆಗೇರಿಸಲು ಅನುವಾಗುವಂತೆ ಶೇ. 50 ರ ಸಹಾಯಧನ ಅಥವಾ ಗರಿಷ್ಟ ಸಹಾಯಧನ ರೂ.3.00 ಲಕ್ಷಗಳು ಮೀರದಂತೆ, ಅರ್ಹ ಯೋಜನಾ ಪ್ರಸ್ತಾವನೆಗಳಿಗೆ ಜಿಲ್ಲಾ ಅನುಷ್ಠಾನ ಸಮಿತಿಯಲ್ಲಿ ಅನುಮೋದನೆ ಪಡೆದು ಸಹಾಯಧನ ನೀಡುವುದು. ಫಲಾನುಭವಿಗಳು ಉಳಿಕೆ ಶೇ.50 ನ್ನು ಬ್ಯಾಂಕ್ ಸಾಲ/ ಸ್ವಂತ ಬಂಡವಾಳ ಹೂಡಿಕೆಯಿಂದ ಅನುಷ್ಠಾನ ಮಾಡಲು ಅವಕಾಶವಿರುತ್ತದೆ.<br><br>ಆ) ರೂ. 3 -10 ಲಕ್ಷದವರೆಗಿನ ಸಹಾಯಧನದ ಪ್ರಸ್ತಾವನೆಗಳಿಗೆ: ಎಲ್ಲಾ ವರ್ಗದ ರೈತರಿಗೆ ಶೇ. 50 ರ ಸಹಾಯಧನ ಅಥವಾ ಗರಿಷ್ಟ ರೂ.10.00 ಲಕ್ಷಗಳು ಮೀರದಂತೆ ಸಹಾಯಧನದ ಪ್ರಸ್ತಾವನೆಗಳಿಗೆ ಜಿಲ್ಲಾ ಅನುಷ್ಠಾನ ಸಮಿತಿಯಲ್ಲಿ ಅನುಮೋದನೆ ಪಡೆದು ಅನುಷ್ಠಾನ ಮಾಡುವುದು. ಫಲಾನುಭವಿಗಳು ಉಳಿಕೆ ಶೇ.50 ನ್ನು ಕಡ್ಡಾಯವಾಗಿ ಬ್ಯಾಂಕ್ ಸಾಲದ ರೂಪದಲ್ಲಿ ಪಡೆದುಕೊಳ್ಳುವುದು.<br><br>2. <u>ರೈತ ಉತ್ಪಾದಕರ ಸಂಸ್ಥೆಗಳಿಗೆ /ಸ್ವಸಹಾಯ ಗುಂಪು/ಸಹಕಾರಿ ಸಂಘಗಳು/ ಸೊಸೈಟಿಗಳು ಇತ್ಯಾದಿಗಳ ಮೂಲಕ ಸೆಕೆಂಡರಿ ಕೃಷಿ ಚಟುವಟಿಕೆ/ಉದ್ದಿಮೆ ಅನುಷ್ಠಾನ:</u> ಯೋಜನಾ ವೆಚ್ಚದ ಗರಿಷ್ಟ 10 ಲಕ್ಷದವರೆಗೆ ಶೇ. 50 ರ ಸಹಾಯಧನ ನೀಡಲಾಗುವುದು. |

| | | |
|---|---|---|
| | | 3. <u>ಸಮುದಾಯ ಕೃಷಿ ಸಂಸ್ಕರಣಾ ಘಟಕಗಳ ಸ್ಥಾಪನೆ: (ರೈತ ಉತ್ಪಾದಕರ ಸಂಸ್ಥೆಗಳಿಗೆ /ಸ್ವಸಹಾಯ ಗುಂಪುಗಳು)/ಸಹಕಾರಿ ಸಂಘಗಳು ಇತ್ಯಾದಿ):</u><br>ಕೃಷಿ ಸಂಸ್ಕರಣೆ ಅಥವಾ ಕೃಷಿ ಸಂಬಂಧಿತ ಉದ್ದಿಮೆಗಳಿಗೆ ಬೇಕಾದ ಯಂತ್ರೋಪಕರಣಗಳನ್ನು ಖರೀದಿಸಲು ಶೇ 50 ರಷ್ಟು ಮಾತ್ರ ಪ್ರತಿ ಸಮುದಾಯ ಕೃಷಿ ಸಂಸ್ಕರಣಾ ಘಟಕಗಳ ಸ್ಥಾಪನೆ ಗರಿಷ್ಟ ರೂ. 15 ಲಕ್ಷ ಪ್ರತಿ ಚಟುವಟಿಕೆ/ಉದ್ದಿಮೆಗೆ, ಸಹಾಯಧನ ಪಡೆಯಲು ಸಂಸ್ಕರಣ ಘಟಕದ ಜೊತೆ ಶೀತಲ ಘಟಕ, ಶೇಖರಣಾ ಮಳಿಗೆಗಳು ಹಾಗೂ ಪ್ರಯೋಗಾಲಯಗಳನ್ನು ಒಳಗೊಂಡಿರಬೇಕು |
| ಇ. | ಸಹಕಾರ ಕೃಷಿ ಪದ್ಧತಿ ಅಳವಡಿಕೆ ಮೂಲಕ ಕೃಷಿಯನ್ನು ಲಾಭದಾಯಕವಾಗಿಸಲು ಸರ್ಕಾರ ಚಿಂತನೆ ನಡೆಸಿದೆಯೇ? | ರಾಜ್ಯ ಸೆಕೆಂಡರಿ ಕೃಷಿ ನಿರ್ದೇಶನಾಲಯದಿಂದ ಸಹಕಾರ ಕೃಷಿ ಪದ್ಧತಿ ಅಳವಡಿಕೆ ಕುರಿತು ಯಾವುದೇ ಯೋಜನೆ ಇರುವುದಿಲ್ಲ. |

ಸಂಖ್ಯೆ: AGRI/168/ASC/2023

14/12

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು